

# ಭಕ್ತ ದಂಪತಿಗಳು

ಕಥೆ : **ಸ್ವಾಮಿ ವಿಮೂರ್ತಾನಂದ** ಚಿತ್ರ : **ಶಂಕರ್**

**1** ನವಗೋಪಾಲ್ ಘೋಷ್ ಹಾಗೂ ಅವನ ಪತ್ನಿ ನಿಸ್ತಾರಿಣೀ ದೇವಿ ಕಲ್ಕತ್ತೆಯಲ್ಲಿ ವಾಸವಾಗಿದ್ದರು. ಒಂದು ಸಲ ಅವರು ಶ್ರೀರಾಮಕೃಷ್ಣರನ್ನು ಭೇಟಿ ಮಾಡಲು ದಕ್ಷಿಣೇಶ್ವರಕ್ಕೆ ಹೋದರು.





**2** ಮೂರು ವರ್ಷಗಳ ನಂತರ ಒಬ್ಬ ಭಕ್ತನಿಗೆ ಶ್ರೀರಾಮಕೃಷ್ಣರು ಹೇಳಿದರು...




**3** ಮೂರು ವರ್ಷಗಳ ನಂತರ ಶ್ರೀರಾಮಕೃಷ್ಣರು ತನ್ನ ಬಗ್ಗೆ ವಿಚಾರಿಸಿದ್ದನ್ನು ಅರಿತು ನವಗೋಪಾಲನಿಗೆ ಆನಂದವಾಯಿತು. ಕೂಡಲೇ ಅವನು ಕುಟುಂಬ ಸಮೇತ ಹೊರಟು, ಶ್ರೀರಾಮಕೃಷ್ಣರನ್ನು ಭೇಟಿಯಾದನು.

**4** ಒಂದು ಸಲ ನವಗೋಪಾಲನು ತನ್ನ ಮನೆಯಲ್ಲಿ ಭಾಗವತ ಪ್ರವಚನವನ್ನು ಏರ್ಪಡಿಸಿದ. ಅದಕ್ಕೆ ಶ್ರೀರಾಮಕೃಷ್ಣರೂ ಬಂದಿದ್ದರು. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಭಾವಸಮಾಧಿಯನ್ನು ಹೊಂದಿದರು. ಅವರಲ್ಲಿ ಶ್ರೀಕೃಷ್ಣನ ಭಾವ ಕಾಣಿಸಿ ಕೊಂಡಿತು.




5
ಆ ಕೂಡಲೇ ನವಗೋಪಾಲನು ಶ್ರೀರಾಮಕೃಷ್ಣರಿಗೆ ಮಾಲೆ ಹಾಕಿ ನಮಸ್ಕರಿಸಿದನು.
ಭಗವಾನ್, ನಮ್ಮನ್ನು ರಕ್ಷಿಸು. ನಾವು ಪ್ರಾಪಂಚಿಕ ವ್ಯವಹಾರಗಳಲ್ಲಿ ಮುಳುಗೇಳುತ್ತಿದ್ದೇವೆ..
ನೋಡಪ್ಪಾ, ನಿನಗೆ ಹೆಚ್ಚು ಸಾಧನೆ ಮಾಡಲಾಗದಿದ್ದರೆ, ಕಡೇಪಕ್ಷ ದಿನದಲ್ಲಿ ಒಂದು ಸಲವಾದರೂ ನನ್ನನ್ನು ನೆನಪಿಸಿಕೋ.
6
ನಿಸ್ತಾರಿಣೀದೇವಿ ಸರಳ ಹಾಗೂ ಪರಿಶುದ್ಧ ಹೃದಯದ ಹೆಂಗಸು. ಶ್ರೀರಾಮಕೃಷ್ಣರು ಅವಳೊಂದಿಗೆ ತುಂಬ ಆತ್ಮೀಯವಾಗಿ ಮಾತನಾಡುತ್ತಿದ್ದರು. ಒಂದು ದಿನ ....
ಅಮ್ಮ, ಯಾವ ಕಾರಣಕ್ಕಾಗಿ ನೀವು ನನ್ನ ಮೇಲೆ ಇಷ್ಟೊಂದು ಭಕ್ತಿ, ಗೌರವ ತೋರಿಸುತ್ತಿದ್ದೀರಿ?
ಸ್ವಾಮಿ, ನಾನು ಅದನ್ನು ಹೇಗೆ ವಿವರಿಸಲಿ? ಪ್ರಹ್ಲಾದ, ಧ್ರುವ ಮುಂತಾದವರೆಲ್ಲ ತಮ್ಮ ಹೆತ್ತವರನ್ನೇ ಮರೆತುಬಿಟ್ಟರಲ್ಲ, ಅದಕ್ಕೆ ಕಾರಣವಾದ ಅದೇ ಭಗವತ್ತತ್ತ್ವವನ್ನು ನಿಮ್ಮಲ್ಲಿ ನಾನು ಕಾಣುತ್ತಿದ್ದೇನೆ.
7
ಇನ್ನೊಂದು ದಿನ ಶ್ರೀರಾಮಕೃಷ್ಣರು ಒಂದು ಬೆಕ್ಕು ಮತ್ತು ಅದರ ಎರಡು ಮರಿಗಳನ್ನು ಅವಳಿಗೆ ಕೊಟ್ಟು ಹೇಳಿದರು: ''ಇವು ನನ್ನಲ್ಲೇ ಆಶ್ರಯ ಪಡೆದಿವೆ. ನೀನು ದಯವಿಟ್ಟು ಇವನ್ನು ನೋಡಿಕೋ.'' ಅನಂತರ ಅವರು ಅವಳನ್ನು ಆಶೀರ್ವದಿಸಿದರು.
ನಿನಗೆ ಎಲ್ಲ ರೀತಿಯಲ್ಲೂ ಮಂಗಳವುಂಟಾಗಲಿ .... ನಿನಗೆ ಭಗವಂತನ ದರ್ಶನವಾಗಿ ನೀನು ಧನ್ಯಳಾಗುವೆ.
ಸ್ವಾಮಿ, ನಾನು ದೇವರಲ್ಲಿ ಶರಣಾಗುವಂತೆ ನನ್ನನ್ನು ಆಶೀರ್ವದಿಸಿ.


8

ಅನೇಕ ವರ್ಷಗಳು ಕಳೆದವು.. ಒಂದು ದಿನ ನಿಸ್ತಾರಿಣೀದೇವಿ ಧ್ಯಾನ ಮಾಡುತ್ತಿದ್ದಾಗ ಅವಳ ಮುಂದೆ ಭಗವಾನ್ ಶ್ರೀರಾಮಚಂದ್ರ ಕಾಣಿಸಿಕೊಂಡ.





9

ನಿಸ್ತಾರಿಣಿಯು ಶ್ರೀರಾಮನ ಪಾದಧೂಳಿಯನ್ನು ತೆಗೆದು ಕೊಳ್ಳಲು ಮುಂದಾದಳು. ಅಷ್ಟರಲ್ಲಿ ಅದೇನಾಶ್ಚರ್ಯ! ಶ್ರೀರಾಮಕೃಷ್ಣರೇ ಅವಳ ಮುಂದೆ ನಿಂತಿದ್ದರು.





10

ಅನಂತರ ಶ್ರೀರಾಮಕೃಷ್ಣರು ಶ್ರೀರಾಮನಲ್ಲಿ ಲೀನ ರಾದರು. ಗುರು ತನ್ನ ಶಿಷ್ಯನಿಗೆ ದೇವರನ್ನು ತೋರಿಸಿಕೊಟ್ಟು ಅನಂತರ ಆ ದೇವರಲ್ಲೇ ಲೀನನಾಗುತ್ತಾನೆ ಎಂದು ಶ್ರೀರಾಮ ಕೃಷ್ಣರು ಹೇಳುತ್ತಿದ್ದರು.




11

ನಿಸ್ತಾರಿಣೀ ದೇವಿ ತನ್ನ ಮಗನನ್ನು ಶ್ರೀರಾಮಕೃಷ್ಣರ ಸೇವೆಗಾಗಿ ಸಮರ್ಪಿಸುವುದಾಗಿ ಸಂಕಲ್ಪ ಮಾಡಿಕೊಂಡಳು. ಮುಂದೆ ಅವಳಿಗೆ ಮಗ ಹುಟ್ಟಿದಾಗ .....


12
ಸ್ವಾಮಿ, ಈ ಮಗನನ್ನು ನಾನು ನಿಮ್ಮ ಸೇವೆಗಾಗಿ ಸಮರ್ಪಿಸಲು ಬಯಸುತ್ತೇನೆ. ದಯವಿಟ್ಟು ಸ್ವೀಕರಿಸಿ.
ಓ, ಎಂಥ ಅದ್ಭುತ ಮಗು! ಸರಿಯಾದ ಸಮಯಕ್ಕೆ ನಾನು ಅವನನ್ನು ಸ್ವೀಕರಿಸುತ್ತೇನೆ. ಈಗ ನೀನು ಅವನನ್ನು ಕರೆದುಕೊಂಡು ಹೋಗಿ ಕಾಳಜಿಯಿಂದ ಬೆಳೆಸು...
ಮುಂದೆ ಅದೇ ಮಗು ರಾಮಕೃಷ್ಣ ಮಹಾಸಂಘವನ್ನು ಸೇರಿ, ಸ್ವಾಮಿ ಅಂಬಿಕಾನಂದ ಎಂಬ ಹೆಸರನ್ನು ಪಡೆಯಿತು.
13
ನವಗೋಪಾಲನು 'ಜೈರಾಮಕೃಷ್ಣ' ಎಂದು ಹೇಳಿದ ಮಕ್ಕಳಿಗೆಲ್ಲ ಸಿಹಿತಿಂಡಿ ಹಂಚುತ್ತಿದ್ದ.
ಜೈ ರಾಮಕೃಷ್ಣ !
ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮ ಸ್ವರೂಪಿಣೇ । ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥
14
ಸ್ವಾಮಿ ವಿವೇಕಾನಂದರು ನವಗೋಪಾಲ ಘೋಷ್‌ನ ಮನೆಯಲ್ಲಿ ಶ್ರೀರಾಮಕೃಷ್ಣರ ಪೂಜೆ ಮಾಡಿದರು. ದೀರ್ಘಕಾಲ ಧ್ಯಾನ ಮಾಡಿದ ನಂತರ ಅವರು 'ಸ್ಥಾಪಕಾಯ ಚ ಧರ್ಮಸ್ಯ' ಎಂಬ ಶ್ಲೋಕವನ್ನು ರಚಿಸಿದರು.
15
ನಿಸ್ತಾರಿಣೀದೇವಿಯು ಇಳಿವಯಸ್ಸಿನಲ್ಲಿ ಕೂಡ ಶ್ರೀರಾಮಕೃಷ್ಣರಿಗೆ ಪ್ರತಿದಿನ ನೈವೇದ್ಯಕ್ಕೆ ಸಿಹಿತಿಂಡಿಯನ್ನು ತಯಾರಿಸುತ್ತಿದ್ದಳು. ಅವಳು 'ಶ್ರೀರಾಮಕೃಷ್ಣ' ಎಂದು ಉಚ್ಚರಿಸುತ್ತ ದೇಹತ್ಯಾಗ ಮಾಡಿದಳು.